## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 06-12-2022

### ಬೀದರ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 62/2022 ಕಲಂ 379 ಐಪಿಸಿ :-

ದಿನಾಂಕ 05/12/2022 ರಂದು 18:30 ಗಂಟೆಗೆ ದಶರಥ ತಂದೆ ಬಸವರಾಜ ಗೌಳಿ ವಯ: 38 ವರ್ಷ, ರವರು ನೀಡಿದ ದೂರಿನ ಸಾರಾಂಶವೆನೆAದರೆ ಇವರ ಹತ್ತಿರ ಹತ್ತಿರವಿರುವ ಪ್ಯಾಶನ್ ಪ್ರೋ ಮೋಟರ ಸೈಕಲ ನಂ. ಕೆಎ-38-ಎಲ್-6668 ನೆದ್ದನ್ನು ದಿನಾಂಕ: 03-11-2022 ರಂದು ಬೆಳಗ್ಗೆ 10:45 ಗಂಟೆ ಸುಮಾರಿಗೆ ಮಗಳಿಗೆ ಶಾಲೆಗೆ ಹೋಗಿ ಅವಳಿಗೆ ಟೀಫನ್ ಬಾಕ್ಸ ಕೊಟ್ಟು ಮರಳಿ ಮನೆಗೆ ಬಂದು ಮನೆಯ ಹತ್ತಿರ ಗಲ್ಲಿಯಲ್ಲಿ ಅಂದರೆ ಚೌಬಾರ ಹತ್ತಿರ ಇರುವ ನಮ್ಮ ಮನೆಯ ಗಲ್ಲಿಯಲ್ಲಿ ನನ್ನ ಮೋಟರ ಸೈಕಲ ಪಾರ್ಕ ಮಾಡಿ ಮನೆಯಲ್ಲಿ ಹೋಗಿದ್ದು ನಂತರ 11:30 ಗಂಟೆ ಸುಮಾರಿಗೆ ಕೆಲಸ ಕುರಿತು ಹೋಗಲು ಮನೆಯಿಂದ ಹೊರಗೆ ಬಂದು ನೋಡಲು ಮನೆಯ ಹತ್ತಿರ ಗಲ್ಲಿಯಲ್ಲಿ ಪಾರ್ಕ ಮಾಡಿದ ನನ್ನ ಮೋಟರ ಸೈಕಲ ಇರಲಿಲ್ಲ. ದಿನಾಂಕ: 03-11-2022 ರಂದು 10:50 ಗಂಟೆಯಿAದ ದಿನಾಂಕ: 03-11-2022 ರಂದು 11:30 ಗಂಟೆ ಸುಮಾರಿಗೆ ನಮ್ಮ ಮೆನಯ ಹತ್ತಿರ ಇದ್ದ ಗಲ್ಲಿಯಲ್ಲಿ ಪಾರ್ಕ ಮಾಡಿದ ಮೋಟರ ಸೈಕಲ ನಂ. ಕೆ.ಎ38-ಎಲ್-6668 ನೇದ್ದು ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 183/2022 ಕಲಂ 379 ಐಪಿಸಿ :-

ದಿನಾಂಕ 05/12/2022 ರಂದು 1800 ಗಂಟೆಗೆ ಫಿರ್ಯಾದಿಯಾದ ಶ್ರೀ ರಾಜಕುಮಾರ ತಂದೆ ಶರಣಪ್ಪಾ ಸಾ: ಸಿ.ಎಮ್.ಸಿ ಕಾಲೋನಿ ಬೀದರ ರವರು ನೀಡಿದ ದೂರಿನ ಸಾರಾಂಶವೆನೆಂದರೆ ಇವರ ಹತ್ತಿರ ಒಂದು ಹೀರೋ ಹೊಂಡಾ ಪ್ಯಾಶನ್ ಪ್ರೋ ಮೋ/ಸೈ ನಂ ಕೆಎ 38 ಎಸ್ 0277 ಮತ್ತು ಅದರ ಇಂಜಿನ ನಂ ಹೆಚ್ಎ10ಇವಿಎಫ್ಎಚ್.ಜಿ64855, ಚಾಸಿಸ್ ನಂ. ಎಮ್.ಬಿ.ಎಲ್.ಎಚ್.ಎ.10ಬಿಎಸ್ಎಫ್ಎಚ್.ಜಿ.82996 ಮತ್ತು ಅದರ ಮಾದರಿ 2015 ಇದ್ದು ಕಪ್ಪು ಬಣ್ಣದ್ದು ಸದರಿ ವಾಹನಇದ್ದು ಅದರ ಅಂ.ಕಿ 30,000/- ರೂ ಇರುತ್ತದೆ. ದಿನಾಂಕ 11/11/2022 ರಂದು ರಾತ್ರಿ 1000 ಗಂಟೆಯಿಂದ ದಿನಾಂಕ 12/11/2022 ರಂದು ಮುಂಜಾನೆ 0800 ಗಂಟೆಯ ಮದ್ಯದ ಅವಧಿಯಲ್ಲಿ ಸಿಎಮ್ ಸಿ ಕಾಲೋನಿಯಲ್ಲಿರುವ ಫಿರ್ಯಾದಿಯ ಮನೆಯ ಮುಂದೆ ನಿಲ್ಲಿಸಿದ ಮೋ/ಸೈ ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಭಾಲ್ಕಿ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 159/2022 ಕಲಂ 13, 34 ಕೆ.ಇ. ಕಾಯ್ದೆ :-

ದಿನಾಂಕ: 05/12/2022 ರಂದು 1630 ಗಂಟೆಗೆ ಶ್ರೀ ನಂದಕುಮಾರ ಪಿ.ಎಸ.ಐ (ಕಾ.ಸು) ರವರು ಠಾಣೆಯಲ್ಲಿದ್ದಾಗ ಖಚಿತ ಮಾಹಿತಿ ಬಂದಿದ್ದೆನೆಂದ್ದರೆ ವಳಸಂಗ ಕ್ರಾಸ ಹತ್ತಿರ ಬೀದರ ಉದಗೀರ ರೋಡ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಅಂತ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ವಳಸಂಗ ಗ್ರಾಮದ ಕ್ರಾಸ ಹತ್ತಿರ ಸ್ವಲ್ಪ ದೂರದಲ್ಲಿ 1500 ಗಂಟೆಗೆ ಹೋಗಿ ಜೀಪ ಮರೆಯಾಗಿ ನಿಲ್ಲಿಸಿ ಎಲ್ಲರು ಜೀಪಿನಿಂದ ಕೆಳಗೆ ಇಳಿದು ನಡೆದುಕೊಂಡು ನೋಡಲು ವಳಸಂಗ ಕ್ರಾಸ ಹತ್ತಿರ ಬೀದರ ಉದಗೀರ ರೋಡ ಸಾರ್ವಜನಿಕ ರೋಡಿನ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಒಂದು ಗೊಬ್ಬರ ಚೀಲದಲ್ಲಿ ಸಾರಾಯಿಯನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುವುದನ್ನು ನೋಡಿ ಖಚಿತ ಪಡಿಸಿಕೊಂಡು ಪಂಚರ ಸಮಕ್ಷಮ, ಸಿಬ್ಬಂದಿಯವರ ಸಹಾಯದಿಂದ ಆತನ ಮೇಲೆ 1505 ಗಂಟೆಗೆ ದಾಳಿ ಮಾಡಿ ನಂತರ ಆತನ ಹೆಸರು ಮತ್ತು ವಿಳಾಸ ವಿಚಾರಿಸಲು ಆತನು ತನ್ನ ಹೆಸರು ಸುನೀಲ ತಂದೆ ವಿನೋದಕುಮಾರ ಸಿಂಧೆ ವಯ: 29 ವರ್ಷ ಜಾ; ಎಸ.ಟಿ ಗೊಂಡ ಉ: ಕೂಲಿ ಕೆಲಸ ಸಾ: ಬೆನಕನಳ್ಳಿ ಸದ್ಯ ಅಂಬೆಸಾಂಗವಿ ಕ್ರಾಸ ಅಂತಾ ತಿಳಿಸಿದನು. ನಂತರ ಆತನ ಮುಂದೆ ಇದ್ದ ಚೀಲದಲ್ಲಿ ಏನು ಇದೆ ಅಂತ

ಪರಿಶೀಲಿಸಿ ನೋಡಲು ಅದರಲ್ಲಿ 1) 90 ಎಂಎಲ್ ವುಳ್ಳ 08 ವರಜಿನಲ್ ಚಾಯ್ಸ ಟೆಟ್ರಾ ಪಾಕೆಟಗಳು ಇದ್ದು ಪ್ರತಿಯೊಂದಕ್ಕೆ 35.13 ರೂ ಬೇಲೆ ಬಾಳುವದು ಇದ್ದು ಹೀಗೆ ಒಟ್ಟು ಅ.ಕಿ 281/- ರೂ, ಆಗಿರುತ್ತದೆ. ಮತ್ತು 180 ಎಮ್.ಎಲ್ 02 ಎಮ್.ಸಿ ಡ್ಯುವೆಲ್ಸ ಸಾರಾಯಿ ಬಾಟಲಗಳು ಇದರ ಮೇಲೆ ಪ್ರತಿಯೊಂದರ ಬೆಲೆ ಒಟ್ಟು 220/- ರೂ ಒಟ್ಟು 440/- ರೂ ಆಗುತ್ತದೆ ಹಾಗೂ 650 ಎಮ.ಎಲ್ ಕಿಂಗಫಿಶರ ಸ್ಟರಾಂಗ ಬಿಯರ ಬಾಟಲುಗಳು 13 ಪ್ರತಿಯೊಂದರ ಬೆಲೆ 160/- ರೂ ಒಟ್ಟು 2080/- ರೂ ನೇದ್ದನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.